5. ನಂಜನಗೂಡು	20.238	10.045	3.552
6. ಪಿರಿಯಾಪಟ್ಟಣ	13.607	10.540	3.966
7. ಟಿ.ನರಸೀಪುರ	13.224	4.311	2.574
8. ಚಾಮರಾಜನಗರ	0.239	-	-
9. ಗುಂಡ್ಲುಪೇಟೆ	0.262	-	-
10. ಕೊಳ್ಳೇಗಾಲ	0.460	-	-
ಒಟ್ಟು	124.959	60.151	23.259

ಇ. ಹೌದು

ಕೆ.ಆರ್. ನಗರದ ಚುಂಚನಕಟ್ಟೆ ಶ್ರೀರಾಮ ಸಕ್ಕರೆ ಕಾರ್ಖಾನೆ.

518(583)

ಶ್ರೀ ಬಸವರಾಜು ಹೆಚ್.ಸಿ(ಪಿರಿಯಾಪಟ್ಟಣ): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಜಿಲ್ಲೆ, ಕೆ.ಆರ್.ನಗರದ ಚುಂಚನಕಟ್ಟೆ ಶ್ರೀರಾಮ ಸಕ್ಕರೆ ಕಾರ್ಖಾನೆ ನಷ್ಟದಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಇದುವರೆಗೂ ಆಗಿರುವ ನಷ್ಟದ ಪ್ರಮಾಣವೆಷ್ಟು?

ಆ) ಈ ಕಾರ್ಖಾನೆಯ ಮೂಲ ಬಂಡವಾಳ ಎಷ್ಟು? ಈ ಕಾರ್ಖಾನೆ ರೈತರಿಗೆ ಹಾಗೂ ಕಾರ್ಮಿಕರಿಗೆ ಬಾಕಿ ಕೊಡಬೇಕಾಗಿರುವ ಹಣವೆಷ್ಟು?

ಇ) ಸರ್ಕಾರ ಆರು ಕೋಟಿ ರೂ.ಸಾಲ ನೀಡಲು ಗ್ಯಾರಂಟಿ ನೀಡಿರುವುದು ಯಾವಾಗ? ಇದುವರೆಗೂ ಈ ಗ್ಯಾರಂಟಿ ಮೇಲೆ ಸಾಲ ನೀಡಿರುವುದು ಎಷ್ಟು? ಯಾವ ಯಾವ ಬ್ಯಾಂಕಿನಿಂದ ಎಷ್ಟು ಹಣವನ್ನು ಪಡೆಯಲಾಗಿರುತ್ತದೆ. (ವಿವರ ನೀಡುವುದು)

ಈ) ಈ ಕಾರ್ಖಾನೆಯನ್ನು ಬಲಪಡಿಸಲು ಸರ್ಕಾರ ಹಮ್ಮಿಕೊಂಡಿರುವ ಕ್ರಮ ಏನು? ಆಡಳಿತ ಮಂಡಳಿಗೆ ಚುನಾವಣೆಯನ್ನು ಯಾವಾಗ ನಡೆಸಲಾಗುವುದು?

ಶ್ರೀ ಡಿ.ಕೆ.ಶಿವಕುಮಾರ್ (ಸಹಕಾರ ಸಚಿವರು):

ಅ) ಬಂದಿದೆ. ದಿನಾಂಕ 31-3-1999ರಲ್ಲಿದ್ದಂತೆ ನಷ್ಟದ ಪ್ರಮಾಣ ರೂ. 8,49,19,323.91.

ಆ) ಮೂಲ ಬಂಡವಾಳ - ರೂ. 3,25,59,549.00 (ದುಡಿಯುವ ಬಂಡವಾಳ)

ಕೊಡಬೇಕಾದ ಹಣ

ರೈತರಿಗೆ - ರೂ. 4,00,44,508.00

ಕಾರ್ಮಿಕರಿಗೆ - ರೂ. 1,28,43,219.00

ಒಟ್ಟು - ರೂ. 5,28,87,727.00

ಇ) ಕಾರ್ಖಾನೆಗೆ ಸರ್ಕಾರವು ದಿ:27-12-2000ರಲ್ಲಿ ರೂ. 6.00 ಕೋಟಿ ಸಾಲ ಪಡೆಯಲು ಗ್ಯಾರೆಂಟಿ ನೀಡಿರುವುದು ಅದರಲ್ಲಿ ಮೈಸೂರು ಜಿಲ್ಲಾ ಕೇಂದ್ರೀಯ ಸಹಕಾರ ಬ್ಯಾಂಕಿನಿಂದ ರೂ. 1.5 ಕೋಟಿ ಬಿಡುಗಡೆಯಾಗಿದೆ. ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿನಿಂದಲೂ ಸಹ ರೂ. 1.5 ಕೋಟಿ ಸಾಲ ಮಂಜೂರಾಗಿದ್ದು, ಹಣ ಇನ್ನು ಬಿಡುಗಡೆಯಾಗಬೇಕಾಗಿದೆ.

ಈ) ಸರ್ಕಾರದ ವತಿಯಿಂದ ಅವಶ್ಯವಿರುವ ಬೆಂಬಲ ನೀಡುವುದು. ಆಡಳಿತಾಧಿಕಾರಿಯ ಅವಧಿಯು ದಿ: 25-5-2001ಕ್ಕೆ ಅಂತ್ಯಗೊಳ್ಳಲಿದ್ದು, ಈ ಅವಧಿಯೊಳಗಾಗಿ ಚುನಾವಣೆ ನಡೆಸಲು ಆಡಳಿತಾಧಿಕಾರಿಗಳು ಕ್ರಮವಿಡುವರು.

ಪಿರಿಯಾಪಟ್ಟಣ ತಾಲ್ಲೂಕು ಬೆಟ್ಟದಪುರ ಗ್ರಾಮಕ್ಕೆ ಆನೆಗಳು ನುಗ್ಗದಂತೆ ಕಂದಕ ತೆಗೆಯುವುದು.

519: (584)

ಶ್ರೀ ಹೆಚ್.ಸಿ.ಬಸವರಾಜು (ಪರಿಯಾಪಟ್ಟಣ) : ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಿರಿಯಾಪಟ್ಟಣ ತಾಲ್ಲೂಕಿನ ಅರಣ್ಯ ಪ್ರದೇಶದಲ್ಲಿ ಎಷ್ಟು ಭಾಗದಲ್ಲಿ ಕಂದಕ ತೆಗೆಯಲಾಗಿದೆ. ಇನ್ನೂ ಎಷ್ಟು ಭಾಗದಲ್ಲಿ ಕಂದಕ ತೆಗೆಯಬೇಕಾಗಿದೆ?

ಆ) ಕಂದಕ ತೆಗೆಯಲಾಗಿದ್ದರೂ ಸಹ ಬೆಟ್ಟದಪುರ ಗ್ರಾಮಕ್ಕೆ ಆನೆ ನುಗ್ಗಿ ಅಪಾರ ಹಾನಿ ಮಾಡಿರುವುದಲ್ಲದೆ ಒಬ್ಬ ವ್ಯಕ್ತಿಯನ್ನು ಬಲಿ ತೆಗೆದುಕೊಂಡಿರುವುದು ಸರ್ಕಾರದ